ಉಡುಪಿ ಜಿಲ್ಲೆಯಲ್ಲಿರುವ ಸರಾಯಿ ಅಂಗಡಿಗಳ ಸಂಖ್ಯೆ

2817(3597) ಶ್ರೀ ಕೆ. ಜಯಪ್ರಕಾಶ ಹೆಗ್ಡೆ (ಬ್ರಹ್ಮಾವರ):- ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಉಡುಪಿ ಜಿಲ್ಲೆಯಲ್ಲಿ ಪರವಾನಗಿ ಪಡೆದ ಸಾರಾಯಿ ಅಂಗಡಿಗಳ ಸಂಖ್ಯೆ ಎಷ್ಟು?

2) ಪರವಾನಗಿ ಪಡೆಯದೆ ಎಷ್ಟು ಅಂಗಡಿಗಳು ನಡೆಯುತ್ತಿವೆ?

3) ಪರವಾನಗಿ ಇಲ್ಲದೆ ಅಂಗಡಿಯನ್ನು ನಡೆಸಲು ಕಾನೂನಿನಲ್ಲಿ ಅವಕಾಶವಿದೆಯೇ?

4) ಇಲ್ಲದಿದ್ದಲ್ಲಿ ಪರವಾನಗಿ ಇಲ್ಲದೆ ನಡೆಸುತ್ತಿರುವ ಅಂಗಡಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :-

1) 339

2) ಇಲ್ಲ

3) ಇಲ್ಲ

4) ಪರವಾನಗಿ ಇಲ್ಲದೆ ನಡೆಯುತ್ತಿರುವ ಅಂಗಡಿಗಳು ಕಂಡು ಬಂದಲ್ಲಿ ಅಂತಹ ಅಂಗಡಿಗಳನ್ನು ಕಾನೂನು ರೀತಿಯ ಕ್ರಮ ಕೈಗೊಂಡು ಮಚ್ಚಿಸಲಾಗುತ್ತದೆ.

ಉಡುಪಿ ಜಿಲ್ಲೆಯ ವಾರಾಹಿ ಯೋಜನೆಗೆ ಅನುದಾನ

2818 (3599) ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ):- ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉಡುಪಿ ಜಿಲ್ಲೆಯ ವರಾಹಿ ಯೋಜನೆಗೆ 1999-2000 ನೇ ಸಾಲಿನಲ್ಲಿ ಎಷ್ಟು ಅನುದಾನ ಮಂಜೂರಾಗಿದೆ;

ಆ) ಹೊಸದಾಗಿ ಎಷ್ಟು ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ;

ಇ) ಹೆಚ್ಚುವರಿ ಅನುದಾನವೇನಾದರೂ ಸರ್ಕಾರದಿಂದ ಮಂಜೂರಾಗಿದೆಯೇ?

ಶ್ರೀ ಎಚ್. ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) :-

ಅ) ಈ ಯೋಜನೆಗೆ 1999-2000ನೇ ಸಾಲಿನಲ್ಲಿ ಒಟ್ಟು ರೂ. 278.75 ಲಕ್ಷಗಳ ಅನುದಾನ ಮಂಜೂರಾಗಿದೆ.

ಆ) ವಾರಾಹಿ ಏತ ನೀರಾವರಿ ಯೋಜನೆಯಡಿಯಲ್ಲಿ ಪ್ರಸ್ತುತ ಸಾಲಿನಲ್ಲಿ ವಾರಾಹಿ ಎಡದಂಡೆ ನಾಲೆಯ 12 ರಿಂದ 21 ಕಿ.ಮೀ. ವರೆಗಿನ ಮಣ್ಣು ಆಗೆತ ಹಾಗೂ ಸಿ.ಸಿ. ಲೈನಿಂಗ್ ಕಾಮಗಾರಿಗೆ ಕಿಲೋಮೀಟರ್‌ವಾರು (ಒಟ್ಟು ಹತ್ತು ಕಾಮಗಾರಿಗಳು) ಟೆಂಡರ್ ಕರೆಯಲಾಗಿದೆ.

ಇ) 1999-2000 ನೇ ಸಾಲಿನಲ್ಲಿ ರೂ. 78.75 ಲಕ್ಷ ಅನುದಾನದ ಅವಕಾಶವಿದ್ದು, ಅದೇ ಸಾಲಿನಲ್ಲಿ ರೂ. 200 ಲಕ್ಷಗಳ ಹೆಚ್ಚುವರಿ ಅನುದಾನ ಮಂಜೂರಾಗಿದೆ.

ಉಡುಪಿ ಜಿಲ್ಲೆಯ ತಾಲ್ಲೂಕು ಪಂಚಾಯತ್ ಸದಸ್ಯರಿಗೆ ಗುಂಡೇಟು

2819 (3849) ಶ್ರೀ ಜಯಪ್ರಕಾಶ್ ಹೆಗಡೆ ಕೆ. (ಬ್ರಹ್ಮಾವರ):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಉಡುಪಿ ಜಿಲ್ಲೆಯ ತಾಲ್ಲೂಕು ಪಂಚಾಯತ್ ಸದಸ್ಯರೋರ್ವರಿಗೆ ಗುಂಡೇಟು ತಗಲಿರುವುದು ನಿಜವೇ?

ಆ) ಗುಂಡೇಟು ಬೀಳಲು ಕಾರಣವೇನು?

ಇ) ಪೊಲೀಸ್ ಇಲಾಖೆ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :-

ಅ) ಉಡುಪಿ ತಾಲ್ಲೂಕು ಪಂಚಾಯತ್ ಸದಸ್ಯ ಧನಂಜಯ ಅಮೀನ್ ಅವರಿಗೆ ಗುಂಡೇಟು ತಗಲಿರುವುದು ನಿಜ.

ಆ) ದಿನಾಂಕ 17-9-2000 ದಂದು ಸಂಜೆ 6-30 ಗಂಟೆ ಸಮಯದಲ್ಲಿ ಧನಂಜಯ ಅಮೀನ್ ಅವರು ಅವರ ಬಾಬ್ತು ಪರವಾನಿಗೆ ಇರುವ ಪಿಸ್ತೂಲನ್ನು ಕ್ಲೀನ್ ಮಾಡುವಾಗ ಅವರ ಮಗು ಹತ್ತರಕ್ಕೆ ಬರುವುದನ್ನು ನೋಡಿ ಪಿಸ್ತೂಲನ್ನು, ತಾನು ಧರಿಸಿದ್ದ ಪಂಚೆಗೆ ಸಿಕ್ಕಿಸಿ ಮಗುವನ್ನು ಎತ್ತಲು ಬಗ್ಗಿದಾಗ, ಪಂಚೆಯಲ್ಲಿ ಸಿಕ್ಕಿಸಿದ್ದ ಪಿಸ್ತೂಲ್ ಮನೆಯೊಳಗಿನ ಮಾರ್ಬಲ್ ನೆಲದ ಮೇಲೆ ಬಿದ್ದು ಪಿಸ್ತೂಲ್ ಗುಂಡು ಸಿಡಿದು ಗಾಯ ಆಗಿದ್ದಾಗಿ ತಿಳಿದು ಬರುತ್ತದೆ.

ಇ) ಪಿಸ್ತೂಲನ್ನು ಸರಿಯಾಗಿ ಭದ್ರತೆಯಿಂದ ಇಟ್ಟುಕೊಳ್ಳದೆ ನಿರ್ಲಕ್ಷತನ ತೋರಿಸಿರುವುದರಿಂದ ಠಾಣಾಧಿಕಾರಿ ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 124:2000 ಕಲಂ. 287 ಐಪಿಸಿ ಮತ್ತು ಕಲಂ 3 ಮತ್ತು 25 ಆಯುಧ ಅಧಿ ನಿಯಮದಂತೆ ಪ್ರಕರಣವನ್ನು ದಾಖಲಿಸಿದ್ದು, ಇದು ತನಿಖೆಯಲ್ಲಿರುತ್ತದೆ.

ನ್ಯಾಯಾಮೂರ್ತಿ ಆರ್. ರಾಮಕೃಷ್ಣ ಆಯೋಗದ ವರದಿ

2820 (3694) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಕೃಷಾಂಕ ಕುರಿತು ಅಧ್ಯಯನ ನಡೆಸಲು ನ್ಯಾಯಮೂರ್ತಿ ಆರ್. ರಾಮಕೃಷ್ಣ ಆಯೋಗ ತನ್ನ ಅಂತಿಮ ವರದಿಯನ್ನು ಯಾವಾಗ ಸಲ್ಲಿಸಿತು;

ಆ) ಈ ಆಯೋಗದ ಶಿಫಾರಸ್ಸುಗಳೇನು?

ಇ) ಈ ಶಿಫಾರಸ್ಸುಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಈ) ಈ ಆಯೋಗವು ಯಾವಾಗ ರಚಿತಗೊಂಡಿತು ಹಾಗೂ ಇದಕ್ಕಾಗಿ ಇಲ್ಲಿಯವರೆಗೆ ಖರ್ಚಾದ ಹಣವೆಷ್ಟು?